# **ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಪಾವಗಡ**

## **ಸಿ.ಸಿ. 252/2016**

ಚಾಸಾ –08

ಫ್ರಾಸಾ–08

**ದಿನಾಂಕಃ 09/10/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರು | ಅಶ್ವತ್ಥಮ್ಮ |
| ಗಂಡನ ಹೆಸರು | ವೀರಣ್ಣ |
| ವಯಸ್ಸು | 75 ವರ್ಷ |
| ವೃತ್ತಿ | ಗೃಹಿಣಿ |
| ವಾಸ | ದೇವಲಕೆರೆ ಗ್ರಾಮ |

**ಮುಖ್ಯವಿಚಾರಣೆಃ ಶ್ರೀ ಎ ಪಿ ಪಿ ರವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುತ್ತೇನೆ.

ಆರೋಪಿ ಕೆ.ಟಿ. ಹಳ್ಳಿ ಎಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಹಣ ಕಟ್ಟಿಸಿಕೊಳ್ಳುತ್ತಿದ್ದರು. ನಾನು ಪ್ರತಿ ತಿಂಗಳು ರೂ. 200/–ಹಣವನ್ನು ಕಟ್ಟುತ್ತಿದ್ದೆ. ನನಗೆ ನನ್ನ ಖಾತೆಯ ಸಂಖ್ಯೆ ಗೊತ್ತಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ಸಾಕ್ಷಿಗೆ ನಿಪಿ. 5 ಅನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿ ಯವರಿಂದ

ಕೆ.ಟಿ. ಹಳ್ಳಿ ಅಂಚೆ ಕಛೇರಿಯಲ್ಲಿ ನಾನು ಆರ್.ಡಿ. ಖಾತೆ ಸಂಖ್ಯೆಃ 393016 ರಲ್ಲಿ ಹಣ ಪಾವತಿಸುತ್ತಿದ್ದೆ ಎಂದರೆ ಸರಿ. ಆರೋಪಿ ಕೆ.ಟಿ. ಹಳ್ಳಿ ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ಖಾತೆಗೆ ಹಣ ಕಟ್ಟುತ್ತಿದ್ದಾಗ ಆರೋಪಿ ನನ್ನ ಪಾಸ್ ಬುಕ್ ನಲ್ಲಿ ಹಣದ ಮೊತ್ತವನ್ನು ಬರೆದು ಸೀಲನ್ನು ಹಾಕುತ್ತಿದ್ದರು ಆದರೆ ಖಾತೆಗೆ ಹಣವನ್ನು ಜಮಾ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. 2011 ನೇ ಸಾಲಿನಲ್ಲಿ ಶಿರಾದಿಂದ ಅಧಿಕಾರಿಗಳು ಬಂದು ಅಂಚೆ ಕಛೇರಿಯಲ್ಲಿ ಪರಿಶೀಲನೆ ಮಾಡಿದಾಗ ಆರೋಪಿ ಚಾಸಾ 2 ರಿಂದ 7 ರವರ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ. 28 ಎಂದು ಗುರುತಿಸಲಾಯಿತು. ನಿಪಿ. 5 ರ ಪಾಸ್ ಪುಸ್ತಕ ನನ್ನ ಪಾಸ್ ಪುಸ್ತಕ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರವಾಗಿ ಶ್ರೀ ಆರ್.ವಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
**ಪಾವಗಡ.**